# ಸ್ವಾಮಿ ವಿವೇಕಾನಂದರು ಮತ್ತು ಆಧುನಿಕ ಮಹಿಳೆ

ಡಾ. ಟಿ.ಕೆ. ಜಯಲಕ್ಷ್ಮಿ

**ಸ್ತ್ರೀಶಕ್ತಿ ಜಾಗೃತವಾಗದೆ ಭಾರತದ ಉದ್ಧಾರ ಸಾಧ್ಯವಿಲ್ಲ ಎಂದು ನಂಬಿದ್ದವರು ಸ್ವಾಮಿ ವಿವೇಕಾನಂದರು. ಅವರ ಬರಹಗಳ ಆಧಾರದ ಮೇಲೆ ಆಧುನಿಕ ಮಹಿಳೆಯ ಚಿತ್ರವನ್ನು ನೀಡಿರುವ ಡಾ.ಜಯಲಕ್ಷ್ಮಿಯವರು ರಾಷ್ಟ್ರೀಯ ವಿದ್ಯಾ ಶೈಕ್ಷಣಿಕ ಸಂಗಾತಿ ಸಂಸ್ಥೆ, ಬೆಂಗಳೂರು, ಇದರ ನಿರ್ದೇಶಕರಾಗಿರುವರು.**

ಪವಿತ್ರಂ ಚರಿತಂ ಯಸ್ಯಾಃ ಪವಿತ್ರಂ ಜೀವನಂ ತಥಾ ।
ಪವಿತ್ರತಾ ಸ್ವರೂಪಿಣ್ಯೈ ತಸ್ಯೈ ಕುರ್ಮೋ ನಮೋ ನಮಃ ॥

"ಯಾರ ನಡೆನುಡಿಗಳು ಪವಿತ್ರವಾಗಿದ್ದವೊ, ಯಾರ ಜೀವನವು ಪವಿತ್ರವಾಗಿತ್ತೊ ಅಂತಹ ಪವಿತ್ರತಾ ಸ್ವರೂಪಿಣಿಯಾದ ಶ್ರೀಶಾರದಾದೇವಿಯವರಿಗೆ ಮತ್ತೆ ಮತ್ತೆ ನಮಸ್ಕಾರ."

## ಸ್ವಾಮೀಜಿಗೆ ಸ್ತ್ರೀಯರ ಮೇಲಿದ್ದ ಅಭಿಮಾನ

"ಯಾರು ನಿಜವಾಗಿಯೂ ಶಕ್ತಿಯ ಆರಾಧಕರು ಗೊತ್ತಿದೆಯೇ ನಿನಗೆ? ಪ್ರಪಂಚದಲ್ಲಿ ಭಗವಂತನೇ ಸರ್ವಾಂತರ್ಯಾಮಿಯಾದ ಶಕ್ತಿಯೆಂದು, ಆ ಮಹಾಶಕ್ತಿ ಸ್ತ್ರೀಯಲ್ಲಿ ಆವಿರ್ಭೂತವಾಗಿರುವುದನ್ನು ಯಾರು ಕಾಣುವರೊ ಅವರು," (ಕೃ.ಶ್ರೇ.೪.೧೦೦) ಎಂದು ಸ್ವಾಮಿ ವಿವೇಕಾನಂದರು ಬರೆಯುತ್ತಾ, ಮಹಿಳೆಯರ ಬಗ್ಗೆ ತಮಗಿದ್ದ ಅಪಾರ ಭಕ್ತಿ ಗೌರವವನ್ನು ವ್ಯಕ್ತಪಡಿಸಿರುವರು. ಸ್ವಾಮಿ ವಿವೇಕಾನಂದರು ಮಹಿಳೆಯರ ಬಗ್ಗೆ ಕಲ್ಪಿಸಿಕೊಂಡಿದ್ದ ಆದರ್ಶಚಿತ್ರ ಶ್ರೀಮಾತೆಯವರಂತಹ ಪವಿತ್ರತಾಮೂರ್ತಿ. ಯತ್ರ ನಾರ್ಯಸ್ತು ಪೂಜ್ಯಂತೇ ರಮಂತೇ ತತ್ರ ದೇವತಾಃ (ಎಲ್ಲಿ ಮಹಿಳೆಯರು ಪೂಜಿಸಲ್ಪಡುತ್ತಾರೋ ಅಲ್ಲಿ ದೇವತೆಗಳು ಆನಂದಿಸುತ್ತಾರೆ) ಎಂಬ ನಂಬಿಕೆಯನ್ನು ವಿವೇಕಾನಂದರು ಪಡೆದಿದ್ದರು, ಹಾಗೂ "ಭಾರತೀಯ ಮಹಿಳೆಯರಿಗೆ ಸಲಹೆಗಳನ್ನು ಕೊಡಲು ಹೋಗಬೇಡಿ, ಅವರಿಗೆ ಸ್ವಾತಂತ್ರ್ಯ, ಧೈರ್ಯ ಕೊಡಿ. ಸಮಸ್ಯೆಗಳನ್ನು ತಾವೇ ಬಗೆಹರಿಸಿಕೊಳ್ಳಬಲ್ಲರು" ಎಂಬ ವಿಶ್ವಾಸವನ್ನು ಹೊಂದಿದ್ದರು. ಮತ್ತೊಂದೆಡೆ ಮನೆ ಕಟ್ಟಡದಿಂದಾಗಿರುವುದಲ್ಲ ಆದರೆ ಅದು ಗೃಹಿಣಿಯಿಂದಾಗುವುದು ಎಂದಿದ್ದಾರೆ. ಅವರ ದೃಷ್ಟಿಯಲ್ಲಿ ಆದರ್ಶ ಭಾರತೀಯ ಮಹಿಳೆ ಎಂದರೆ "ಸೀತೆ". "ಭಾರತೀಯ ಪರಿಪೂರ್ಣ ನಾರಿಯರ ಆದರ್ಶಗಳೆಲ್ಲವೂ ಸೀತೆಯ ಜೀವನದಲ್ಲಿ ಮೂಡಿಬಂದಿವೆ... ಮಹಿಮಾಮಯಿ ಸೀತೆಯು ಸ್ವಯಂ ಶುದ್ಧತೆಗಿಂತಲೂ ಪರಿಶುದ್ಧಳು. ಸಹಿಷ್ಣುತೆಯ ಪರಮೋಚ್ಚ ಆದರ್ಶ ಅವಳು. ಅವಳು ಸ್ವಲ್ಪವೂ ಗೊಣಗದೆ ಮಹಾದುಃಖವನ್ನು ಅನುಭವಿಸಿದಳು," (ಕೃತಿ ಶ್ರೇಣಿ, ೩.೧೩೧) ಎನ್ನುತ್ತಾರೆ ಸ್ವಾಮೀಜಿ. "ರಾಜಕೀಯ ಮುತ್ಸದ್ದಿತನದಲ್ಲಿ, ಗಡಿರಕ್ಷಣೆಯಲ್ಲಿ, ರಾಜ್ಯಾಡಳಿತದಲ್ಲಿ ಹಾಗೂ ಯುದ್ಧ ಮಾಡುವುದರಲ್ಲಿಯೂ ಕೂಡ, ಪುರುಷರಿಗಿಂತ ಮೇಲಲ್ಲದಿದ್ದರೂ ತಾವು ಅವರಿಗೆ ಸಮಾನರೆಂಬುದನ್ನು ಮಹಿಳೆಯರು ತೋರಿಸಿರುವರು. ಭಾರತದಲ್ಲಂತೂ ಈ ವಿಷಯದಲ್ಲಿ ಸಂದೇಹವೇ ಇಲ್ಲ. ತಮಗೆ ಅವಕಾಶ ದೊರಕಿದಾಗಲೆಲ್ಲ ಪುರುಷರಷ್ಟೇ ತಾವು ಸಮರ್ಥರು ಎಂಬುದನ್ನು ಅವರು ಪ್ರಮಾಣೀಕರಿಸಿರುವರು. ಅಷ್ಟೇ ಅಲ್ಲದೆ, ಅವರು ಪುರುಷರಂತೆ ಅವನತಿ ಹೊಂದುವುದಿಲ್ಲ. ಅವರು ಯಾವಾಗಲೂ ನೀತಿಬದ್ಧರಾಗಿರುತ್ತಾರೆ. ಅದು ಅವರ ಸ್ವಭಾವ. ಈ ವಿಷಯದಲ್ಲಿ—ಕೊನೆಯ ಪಕ್ಷ ಭಾರತದಲ್ಲಿ—ಅವರು ರಾಜ್ಯಭಾರ ಮಾಡುವಾಗ ಪುರುಷರಿಗಿಂತ ತಾವು ಮೇಲೆಂಬುದನ್ನು ತೋರಿಸಿರುವರು. ಜಾನ್ ಸ್ಟುವರ್ಟ್ ಮಿಲ್ ಈ ವಿಷಯವನ್ನು ಪ್ರಸ್ತಾಪಿಸುತ್ತಾನೆ," (*Complete Works of Swami Vivekananda*, Advaita Ashrama, Calcutta Vol.9, p.201).

## ಪಾಶ್ಚಾತ್ಯ ಮಹಿಳೆಯರು

ಸ್ವಾಮೀಜಿಯವರು ಭಾರತೀಯ ಮಹಿಳೆಯ ಬಗ್ಗೆ ತಳೆದಿದ್ದ ಮನೋಭಾವ ಈ ರೀತಿ ಬಹಳ ಸ್ಪಷ್ಟ ಹಾಗೂ ಶ್ರೇಷ್ಠತರವಾಗಿದೆ ಎಂದು ತಿಳಿದುಬರುತ್ತದೆ. ಇದರಿಂದ ಅವರು ಶ್ರೀಮಾತೆ ಶಾರದಾದೇವಿ ಹಾಗೂ ಸೀತೆ ಇಂಥವರ ಜೀವನವನ್ನು ಪ್ರತಿಬಿಂಬಿಸುವವಳೇ ಆದರ್ಶ ಮಹಿಳೆ ಎಂಬ ದೃಢ ನಂಬಿಕೆಯುಳ್ಳವರೆಂದೂ ಹಾಗೂ ಮಹಿಳೆಯ ಬಗ್ಗೆ ಬಹಳ ಸಂಪ್ರದಾಯಸ್ಥ ಭಾವನೆ ಅವರಲ್ಲಿ ಇತ್ತು ಎಂದೂ ಭಾಸವಾಗುವುದು. ಆದರೆ ಅವರ ವಿಶ್ವಪರ್ಯಟನದ ನಂತರ ಮಹಿಳೆಯರ ಬಗ್ಗೆ ಅವರ ಮನಸ್ಸಿನಲ್ಲಿದ್ದ ಆಳವಾದ ಭಾವನೆಗಳು ಬೆಳಕಿಗೆ ಬರುತ್ತವೆ. ಮಹಿಳೆ ಈಗಿನ ಪ್ರಪಂಚದಲ್ಲಿ ಹೇಗಿರಬೇಕೆಂಬುದರ ಬಗ್ಗೆಯೂ ಚಿಂತನೆ ಮಾಡಿದ್ದಾರೆ ಎಂದೂ ತಿಳಿದುಬರುತ್ತದೆ. ಸಮಾಜದ ಕ್ಷೇಮಾಭಿವೃದ್ಧಿ ಆಗಬೇಕಾದರೆ ಮಹಿಳೆಯರ ಸ್ಥಿತಿಗತಿಗಳನ್ನು ಉತ್ತಮ ಪಡಿಸಿದರೆ ಮಾತ್ರ ಸಾಧ್ಯ; ಹೇಗೆ ಹಕ್ಕಿ ಹಾರಾಡಲು ಎರಡೂ ರೆಕ್ಕೆಗಳು ಅವಶ್ಯಕವೊ, ಅದೇ ರೀತಿ ಸ್ತ್ರೀ-ಪುರುಷರ ಸಮಾನವಾಗಿ ಅಭಿವೃದ್ಧಿಯಾಗಬೇಕೆಂಬ ಆಕಾಂಕ್ಷೆ ಅವರದ್ದಾಗಿತ್ತು.

ಪಾಶ್ಚಾತ್ಯ ಮಹಿಳೆಯರ ಧೈರ್ಯ, ಸ್ವಾತಂತ್ರ್ಯಗಳನ್ನು ನೋಡಿದಾಗಲೆಲ್ಲ ನಮ್ಮ ಭಾರತದ ಹೆಣ್ಣುಮಕ್ಕಳು ಹೀಗಿಲ್ಲವಲ್ಲ! ಎಂಬ ಕಳವಳ ವಿವೇಕಾನಂದರಿಗೆ. ನಮ್ಮ ಮಹಿಳೆಯರು ಎಂದು ಈ ರೀತಿ ಧೈರ್ಯವಂತರಾಗುವರೋ ಎಂಬ ತವಕವನ್ನು ಅವರು ವ್ಯಕ್ತಪಡಿಸಿದ್ದಾರೆ. ವಿದೇಶದಲ್ಲಿ ಮಹಿಳೆಯರು ಸ್ವೇಚ್ಛೆಯಾಗಿ ತಿರುಗಾಡುವುದು, ಮೇಲ್ತರದ ಶಿಕ್ಷಣ ಪಡೆಯುವುದು, ಮುಕ್ತವಾದ ನೇರವಾದ ಪ್ರಶ್ನೆಗಳನ್ನು ಕೇಳುವುದು ಇತ್ಯಾದಿಗಳನ್ನು ಗಮನಿಸಿ

ದಾಗ ಸ್ವಾಮೀಜಿಯವರಿಗೆ, "ಆ ಹೆಣ್ಣುಮಕ್ಕಳಿಗೆ ಅದೆಷ್ಟು ಧೈರ್ಯ, ಆತ್ಮವಿಶ್ವಾಸವಿದೆ! ನಮ್ಮ ಭಾರತದ ಮಹಿಳೆಯರು ಅದರಲ್ಲೂ ಗ್ರಾಮಾಂತರದಲ್ಲಿರುವವರು, ಎಷ್ಟು ಸ್ವಾತಂತ್ರ್ಯ ಹೀನರು" ಎಂದು ಹಲುಬಿದ್ದಾರೆ. ಪಾಶ್ಚಾತ್ಯ ದೇಶಗಳಲ್ಲಿ ಮಹಿಳೆಯರ ಉನ್ನತ ಸ್ಥಿತಿಯನ್ನು ಕಂಡು, ಭಾರತದಲ್ಲಿ ಅವರ ಸ್ಥಿತಿಯನ್ನು ನೆನೆಸಿಕೊಂಡು ಸ್ವಾಮೀಜಿ ಮಮ್ಮಲ ಮರುಗಿದರು. ಪಾಶ್ಚಾತ್ಯ ದೇಶಗಳ ಯಶಸ್ಸಿಗೆ ಅಲ್ಲಿಯ ಸ್ತ್ರೀಯರ ಉನ್ನತಿಯೇ ಮುಖ್ಯ ಕಾರಣವೆಂಬುದನ್ನು ಗುರುತಿಸಿ, ಭಾರತದ ಉದ್ಧಾರವೂ ಸ್ತ್ರೀಯರ ಉದ್ಧಾರವನ್ನು ಅವಲಂಬಿಸಿದೆ ಎಂದು ಒತ್ತಿ ಹೇಳಿದರು. "ನಿಮ್ಮ ಮಹಿಳೆಯರ ಸ್ಥಿತಿಯನ್ನು ಉತ್ತಮಗೊಳಿಸಬಲ್ಲಿರಾ? ಅನಂತರ ನಿಮ್ಮ ಅಭಿವೃದ್ಧಿಗೆ ದಾರಿ ಇದೆ. ಹಾಗಿಲ್ಲದೆ ಇದ್ದರೆ ಈಗ ಇರುವಂತೆಯೇ ಎಂದೆಂದಿಗೂ ಹೀನಸ್ಥಿತಿಯಲ್ಲಿ ಉಳಿಯಬೇಕಾಗುತ್ತದೆ" ಎಂದು ಸ್ವಾಮೀಜಿ ಎಚ್ಚರಿಕೆ ನೀಡುತ್ತಾರೆ, ತಮ್ಮ ಭಾರತೀಯ ಶಿಷ್ಯನೊಬ್ಬನಿಗೆ ಬರೆದ ಪತ್ರದಲ್ಲಿ (ಕೃತಿಶ್ರೇಣಿ, ೪.೧೦೧).

## ಆಧುನಿಕ ಮಹಿಳೆ ಹೇಗಿರಬೇಕು

ಭಾರತೀಯ ಮಹಿಳೆಯರಲ್ಲಿ ಇರುವ ವಿಧೇಯತೆ, ಸ್ವಾಮಿನಿಷ್ಠೆ, ತ್ಯಾಗ ಈ ಆದರ್ಶಗಳು ಅತ್ಯಂತ ಮೇಲ್ಮಟ್ಟದಲ್ಲಿದ್ದುದನ್ನು ಸ್ವಾಮೀಜಿ ಗಮನಿಸಿದ್ದರು. ಭಾರತದ ಮಹಿಳೆ ತನ್ನ ಸ್ವಾಭಿಮಾನ, ಆತ್ಮ ವಿಶ್ವಾಸಗಳನ್ನು ಬಲಿಕೊಟ್ಟು ವಿಧೇಯತೆ ಅಥವಾ ನಿಷ್ಠೆ ತೋರಿಸುವುದರಲ್ಲಿ ಅರ್ಥವಿಲ್ಲ. ದೇವತಾಸ್ವರೂಪಿಣಿಯಾದ ಸ್ತ್ರೀ ಎಲ್ಲ ಕೆಲಸ-ಕಾರ್ಯಗಳಿಗೆ ಗಂಡನೊಡನೆ ಸಹಭಾಗಿತ್ವ ಪಡೆಯುವಂತೆ, ಜ್ಞಾನ, ವಿಜ್ಞಾನ, ಚಿಂತನೆ, ತೀರ್ಮಾನ ತೆಗೆದುಕೊಳ್ಳುವುದು, ನಾಯಕತ್ವ ವಹಿಸುವುದು ಇವುಗಳಲ್ಲಿಯೂ ಮುಂದೆ ಬರಬೇಕು. ಮೂಢನಂಬಿಕೆ, ಅಂಧವಿಶ್ವಾಸಗಳನ್ನು ಬಿಟ್ಟು, ಆದರೆ ತನ್ನ ಕರ್ತವ್ಯ ಸಂಸ್ಕೃತಿಗಳನ್ನು ಬಿಡದೆ ಮಹಿಳೆಯರು ಮುಂದೆ ಬರಬೇಕೆಂಬುದು ಸ್ವಾಮೀಜಿಯವರು ಅವರ ಬಗ್ಗೆ ಕಂಡ ಕನಸು. ಸೋದರಿ ನಿವೇದಿತಾಳಂತಹ ಶಿಷ್ಯೆಯರನ್ನು ಪರೀಕ್ಷಿಸಿ, ಅವರಿಗೆ ಭಾರತದ ಸ್ತ್ರೀಯರಿಗೆ ಕೊಡಬೇಕಾದ ಶಿಕ್ಷಣದ ಕ್ರಮವನ್ನು ತಿಳಿಯ ಹೇಳುವಾಗ ಸ್ವಾಮೀಜಿಯವರ ಅಂತರಾತ್ಮದಲ್ಲಿದ್ದ ಆಧುನಿಕ ಮಹಿಳೆಯ ಕಲ್ಪನೆ ಸ್ಪಷ್ಟವಾಗುವುದು. ಪದೇ ಪದೇ ಭಾರತೀಯ ಮಹಿಳೆಯಲ್ಲಿರುವ ಒಳ್ಳೆಯ ಗುಣಗಳನ್ನೂ ಆದರ್ಶಗಳನ್ನೂ ಎತ್ತಿ ಹಿಡಿದರೂ, ಅವರಲ್ಲಿರುವ ನ್ಯೂನತೆಗಳಾದ ಅಂಜುಬುರುಕುತನ, ಮೌಢ್ಯ, ಸಮಾಜದ ಕಟ್ಟುಪಾಡಿಗೆ ದಾಸ್ಯ ಇವುಗಳನ್ನು ಅಷ್ಟೇ ಕಠೋರವಾಗಿ ಟೀಕಿಸಿದ್ದಾರೆ.

ಸ್ವಾಮಿ ವಿವೇಕಾನಂದರು ಆಧುನಿಕ ಮಹಿಳೆಗೆ ಕೊಟ್ಟಿರುವ ಸಂದೇಶಗಳು ಹೀಗಿವೆ : ನಿಜವಾದ ಸ್ತ್ರೀತ್ವ ನಿಜ ಸಂನ್ಯಾಸತ್ವದಂತೆ ಹಿರಿದಾದದ್ದು. ಮಹಿಳೆ ಎಷ್ಟೇ ಜ್ಞಾನಿಯಾದರೂ ತನ್ನ ದೇಶದ ಸಂಸ್ಕೃತಿಯನ್ನು ಬಿಡಕೂಡದು. ಆಧುನಿಕ ವಿಜ್ಞಾನ ತಂತ್ರಜ್ಞಾನಗಳನ್ನೂ ಬಿಡದ ಮಹಿಳೆ ಚೆನ್ನಾಗಿ ಶಿಕ್ಷಣ ಪಡೆಯಬೇಕು. ಆದರೆ ಪ್ರಾಚೀನ ಆಧ್ಯಾತ್ಮಿಕತೆಯನ್ನು ಬಿಡಬಾರದು. ಆಧುನಿಕ ಮಹಿಳೆ ತನ್ನ ಸಂಸ್ಕೃತಿಯ ಪ್ರತಿಬಿಂಬವಾಗಿದ್ದು ಶ್ರೇಷ್ಠತರ ಜ್ಞಾನವನ್ನು ಪಡೆಯವಂತಹವಳಾಗಬೇಕು. ಈ ವಿವೇಕ, ವಿವೇಚನೆಯನ್ನು ತಂದುಕೊಡುವ ಶಿಕ್ಷಣವೇ ಅವಳ ವ್ಯಕ್ತಿತ್ವವನ್ನು ರೂಪಿಸುವುದೆಂಬ ಭಾವನೆಗಳನ್ನು ಸ್ಪಷ್ಟವಾಗಿ ಸ್ವಾಮೀಜಿ ತಿಳಿಯಪಡಿಸಿದ್ದಾರೆ.

ಯಾವ ಕುಟುಂಬದಲ್ಲಿ ಮಹಿಳೆಯರು ಸುಖಸಂತೋಷದಿಂದ ನೆಲೆಸುವರೊ ಆ ಕುಟುಂಬವನ್ನು ಭಗವಂತ ಅನುಗ್ರಹಿಸುತ್ತಾನೆ ಎಂದು ಸ್ವಾಮೀಜಿ ನಂಬಿದ್ದರು. ಆದ್ದರಿಂದ ಗಂಡುಮಕ್ಕಳಂತೆ ಹೆಣ್ಣುಮಕ್ಕಳನ್ನೂ ನೋಡಿಕೊಳ್ಳಬೇಕು, ಅವರಿಗೂ ವಿದ್ಯಾಭ್ಯಾಸವನ್ನು ನೀಡಬೇಕು, ಎಂಬ ವೇದಕಾಲದ ಧೋರಣೆಯನ್ನೇ ವಿವೇಕಾನಂದರು ವ್ಯಕ್ತಪಡಿಸಿರುವರು.

## ಪವಿತ್ರತೆ ಮತ್ತು ಪರಾಕ್ರಮ

ಸಾಧಾರಣವಾಗಿ ಆಧುನಿಕ ಮಹಿಳೆ ಎಂದಾಗ ಜನಸಾಮಾನ್ಯರ ಮನಸ್ಸಿಗೆ ಬರುವುದು ಹೆಚ್ಚು ವಿದ್ಯಾವಂತಳಾದ, ವೇಷ-ಭೂಷಣಗಳಲ್ಲಿ ಪಾಶ್ಚಾತ್ಯರನ್ನು ಅನುಕರಿಸುವ, ಸ್ವಾಭಿಮಾನದಿಂದ ಬೀಗುವ, ಸೌಜನ್ಯಹೀನಳಾದ, ಗಂಡುಮಕ್ಕಳ ಜೊತೆ ಅತಿಸಲಿಗೆಯಿಂದ ವರ್ತಿಸುವ ಮತ್ತು ಸಾಮಾಜಿಕ ಪರಿಸರದಲ್ಲಿ ಪ್ರತಿಷ್ಠಿತ ಸ್ಥಾನ ಹೊಂದಿರುವ ಹೆಣ್ಣಿನ ಚಿತ್ರ. ಆದರೆ ಸ್ವಾಮೀಜಿಯವರ ದೃಷ್ಟಿಕೋನದಲ್ಲಿ ಮಹಿಳೆಯು ಧೈರ್ಯ, ಸಾಹಸ, ತಾಳ್ಮೆ, ವಿವೇಕಗಳನ್ನು ಹೊಂದಿದ್ದು, ಭಾರತೀಯ ಸಂಸ್ಕೃತಿಯನ್ನು ಕಳೆದುಕೊಳ್ಳದೆ ಸೌಜನ್ಯಶೀಲಳಾಗಿರಬೇಕು.

ಅವರು ಹೇಳುತ್ತಾರೆ : "ಇತರ ವಿಷಯಗಳ ಜೊತೆಗೆ ಮಹಿಳೆಯರು ಪರಾಕ್ರಮ ಮತ್ತು ಶೌರ್ಯವನ್ನು ಕಲಿಯಬೇಕು. ಈ ವರ್ತಮಾನ ಕಾಲದಲ್ಲಿ ಅವರು ಆತ್ಮರಕ್ಷಣೆಯ ಪಾಠವನ್ನೂ ಕಲಿಯುವುದು ಅತ್ಯಾವಶ್ಯಕವಾಗಿದೆ. ನೋಡಿ, ಝಾನ್ಸಿರಾಣಿ ಎಂಥಾ ಅದ್ಭುತ ಮಹಿಳೆ!" (ಕೃತಿಶ್ರೇಣಿ, ೮.೩೧೦). ಭವಿಷ್ಯದಲ್ಲಿ ಹೆಣ್ಣುಮಕ್ಕಳು ಝಾನ್ಸಿರಾಣಿಯಂತೆ ಸ್ವಾವಲಂಬಿ ಹಾಗೂ ತನ್ನನ್ನು ತಾನೇ ಕಾಪಾಡಿಕೊಳ್ಳುವ ಸಾಮರ್ಥ್ಯ ಹೊಂದಿದ ನಾರಿಯಾಗಬೇಕು. ಗಂಡಸಿನ ಮೇಲೆ ಅಷ್ಟೊಂದು ಅವಲಂಬನೆ ಬೇಡವೆಂಬ ಅಭಿಪ್ರಾಯವನ್ನೇ ಸ್ವಾಮೀಜಿ ವ್ಯಕ್ತಪಡಿಸಿರುವುದು ಸ್ಪಷ್ಟವಾಗಿದೆ. ಹೆಣ್ಣು ತನ್ನತನವನ್ನು ಬೆಳೆಸಿಕೊಳ್ಳಬೇಕು. ವೇದ ಉಪನಿಷತ್ತುಗಳ ಕಾಲದಿಂದಲೂ ಮಹಿಳೆಯರು ತಮ್ಮ ಹಿತವಚನಗಳನ್ನೂ ಧರ್ಮಸಂದೇಶಗಳನ್ನೂ ಸಮಯಕ್ಕನುಗುಣವಾಗಿ ಕೊಟ್ಟು ಅದರಿಂದಾಗಿ ಮಾನ್ಯತೆ ಪಡೆದಿರುವ ಸಂದರ್ಭಗಳು ಹಲವಾರಿವೆ. ಅಹಂಕಾರ ಅಥವಾ ಸ್ವಾಭಿಮಾನವಿಲ್ಲದೆ, ಮಾತೃವಾತ್ಸಲ್ಯದಿಂದ, ನಿಃಸ್ವಾರ್ಥ ಸೇವಾಮನೋಭಾವದಿಂದ ಕ್ಷಮಾಗುಣಗಳಿಂದ ಮಹಿಳೆಯರು ದಾರಿ ತೋರಿಸಿರುವ ಸಂದರ್ಭಗಳನ್ನು ಸ್ವಾಮೀಜಿಯವರು ತುಂಬು ಹೃದಯದಿಂದ ಸ್ಮರಿಸಿರುವುದುಂಟು.

## ತಾಯ್ತನದ ಆದರ್ಶ

ಭಾರತೀಯ ಮಹಿಳೆಯ ಆದರ್ಶ ತಾಯ್ತನ ಎಂಬುದು ಸ್ವಾಮಿ ವಿವೇಕಾನಂದರ ನಿಲುವು. ತಾಯ್ತನದ ಮುಖ್ಯ ಲಕ್ಷಣವೇ ತ್ಯಾಗ. ಇಡೀ ಕುಟುಂಬದ ಆಧಾರವೇ ತಾಯಿಯ ತ್ಯಾಗ. ಈ ತ್ಯಾಗದ ಮೂಲಕವೇ ಅವಳು ಇಡೀ ಕುಟುಂಬವನ್ನು ಆಳುತ್ತಾಳೆ. "ದೇವರು ಎಲ್ಲ ಕಡೆಯೂ ಇರಲಾಗುವುದಿಲ್ಲ, ಅದಕ್ಕಾಗಿಯೇ ತಾಯಂದಿರನ್ನು ಸೃಷ್ಟಿಸಿದನು" ಎಂಬ ಯಹೂದ್ಯ ಗಾದೆ ತಾಯಿಯ ಪ್ರಾಮುಖ್ಯವನ್ನು ಎತ್ತಿತೋರಿಸುತ್ತದೆ. ವಿವೇಕಾನಂದರು ಹೇಳುತ್ತಾರೆ: "ನಮ್ಮ ಕುಟುಂಬದಲ್ಲಿ ತಾಯಿಯೇ ದೇವತೆ. ಈ ಜಗತ್ತಿನಲ್ಲಿ ನಿಜವಾದ ಪ್ರೀತಿಯನ್ನು, ಅತ್ಯಂತ ನಿಃಸ್ವಾರ್ಥ ಪ್ರೀತಿಯನ್ನು ಕಾಣುವುದು ತಾಯಿಯಲ್ಲಿ ಮಾತ್ರವೇ. ಎಲ್ಲ ದುಃಖವನ್ನು ಅನುಭವಿಸಿ ಯಾವಾಗಲೂ ಪ್ರೀತಿಸುತ್ತಿರುವುದು ಆಕೆಯ ಸ್ವಭಾವ. ತಾಯಿಯ ಪ್ರೇಮವಲ್ಲದೆ ಮತ್ತಾವುದು ಭಗವತ್ಪ್ರೇಮವನ್ನು ಪ್ರತಿನಿಧಿಸಬಲ್ಲದು? ಆದ್ದರಿಂದ ಹಿಂದೂಗಳಿಗೆ ತಾಯಿಯು ಭಗವಂತನ ಅವತಾರ,"(Complete Works of Vivekananda 9:202).

ವಿವೇಕಾನಂದರ ಅಭಿಪ್ರಾಯದಲ್ಲಿ ಆಧುನಿಕ ಮಹಿಳೆಯು ಸುಶಿಕ್ಷಿತಳಾಗಿ ಸಾಮಾಜಿಕ ಕಾರ್ಯಕ್ಷೇತ್ರಗಳಲ್ಲಿ ಭಾಗವಹಿಸುವುದರ ಉತ್ಸಾಹದಲ್ಲಿ ತನ್ನ ತಾಯ್ತನದ ಆದರ್ಶ ಮತ್ತು ಹೊಣೆಗಾರಿಕೆಯನ್ನು ಕಡೆಗಣಿಸಬಾರದು. ಸಮಾಜದ ಉನ್ನತಿಯಲ್ಲಿ ತಾಯಂದಿರ ಪಾತ್ರ ಅತ್ಯಂತ ಪ್ರಮುಖವಾದುದು. ಪ್ರಸಿದ್ಧ ಮನೋವೈದ್ಯರಾದ ಸಿ.ಇ. ಬಾರ್ಕರ್ ಅವರು ಹೇಳುತ್ತಾರೆ: "ತಾಯ್ತನದ ಅರಿವುಳ್ಳ ತಾಯಂದಿರಿಗೆ ಪ್ರಪಂಚವನ್ನು ಸುವ್ಯವಸ್ಥೆಗೆ ತರುವ ಸಾಮರ್ಥ್ಯವಿದೆ. ಉತ್ತಮ ತಾಯಿಯ ಆರೈಕೆ ಸ್ಥಿರವೂ ಶಾಂತಿಯುತವೂ ಆದ ಒಂದು ನಾಗರಿಕತೆಯನ್ನು ಕಟ್ಟುವಲ್ಲಿ ನಂಬಲಸಾಧ್ಯವಾಗುವಷ್ಟು ಕೊಡುಗೆಯನ್ನು ನೀಡುತ್ತದೆ."

ವಿವೇಕಾನಂದರೇ ತಾವು ತಮ್ಮ ತಾಯಿಯಿಂದ ಪಡೆದ ಅನರ್ಘ್ಯ ಸಂಸ್ಕೃತಿಯ ಬಗ್ಗೆ ಹೀಗೆ ಹೇಳುತ್ತಾರೆ: "ನಾನು ಹುಟ್ಟುವುದಕ್ಕೆ ಮುಂಚೆ ನನ್ನ ತಾಯಿಯು ಉಪವಾಸ, ಪ್ರಾರ್ಥನೆ ಮುಂತಾದ ನೂರಾರು ವ್ರತಗಳನ್ನು ಆಚರಿಸುತ್ತಿದ್ದುದು ನನಗೆ ಗೊತ್ತು.... ನನ್ನಲ್ಲಿರುವ ಧಾರ್ಮಿಕ ಸಂಸ್ಕೃತಿಯೆಲ್ಲವೂ ಬಂದಿರುವುದು ಅವಳಿಂದ. ಪ್ರಜ್ಞಾಪೂರ್ವಕವಾಗಿ ನನ್ನನ್ನು ಈ ರೀತಿ ರೂಪಿಸಿದವಳೇ ನನ್ನ ತಾಯಿ. ನನ್ನಲ್ಲಿರುವ ಸತ್ಪ್ರವೃತ್ತಿಯೆಲ್ಲವನ್ನೂ ತಾಯಿಯೇ—ಯಾಂತ್ರಿಕವಾಗಿಯಲ್ಲ, ಪ್ರಜ್ಞಾಪೂರ್ವಕವಾಗಿ—ನನಗೆ ನೀಡಿರುವುದು." (*Complete Works of Vivekananda* 9:202).

## ಮಹಿಳೋದ್ಧಾರದ ಸಂಕಲ್ಪ

ಒಟ್ಟಿನಲ್ಲಿ ಹೇಳುವುದಾದರೆ, ತಾಯ್ತನದ ಆದರ್ಶವನ್ನು ಉಳಿಸಿಕೊಂಡು, ನಾಗರಿಕತೆ ಬೆಳೆದಂತೆಲ್ಲ ಜ್ಞಾನಭಂಡಾರವನ್ನು ಹೆಚ್ಚಿಸಿಕೊಂಡು, ಅಧ್ಯಾತ್ಮದ ಹಿನ್ನೆಲೆಯಿಂದ ಧೈರ್ಯ, ಸಾಹಸ, ಆತ್ಮವಿಶ್ವಾಸ ಮತ್ತು ಆತ್ಮಾವಲಂಬನೆ ಪಡೆಯುವ ಮಹಿಳೆಯೇ ಸ್ವಾಮೀಜಿಯವರ ದೃಷ್ಟಿಯಲ್ಲಿ ಆಧುನಿಕ ಮಹಿಳೆಯಾಗುತ್ತಾಳೆ. ಮಹಿಳೆಯರು ಇತ್ತೀಚಿನ ದಿನಗಳಲ್ಲಿ ತಾಯ್ತನ ಮತ್ತು ಸ್ತ್ರೀಸಹಜ ಗುಣಗಳನ್ನು ರೂಢಿಸಿಕೊಳ್ಳುವ ದಿಶೆ ಬಿಟ್ಟು, ಬೇಜವಾಬ್ದಾರರಾಗುತ್ತಿದ್ದಾರೆ ಹಾಗೂ ಸಂಕುಚಿತ ಮನೋಕಾಮನೆಗಳನ್ನು ಈಡೇರಿಸಿಕೊಳ್ಳುವುದರಲ್ಲೇ ತೊಡಗುತ್ತಿದ್ದಾರೆ. ಅವರು ತಮ್ಮ ಸಾಮಾಜಿಕ ಜವಾಬ್ದಾರಿಯನ್ನು ಅರಿತು ವರ್ತಿಸುವುದು ಅತಿ ಮುಖ್ಯ. ಭಾರತದ ಮಹಿಳೆಯರಿಗಾಗಿ ಸ್ವಾಮೀಜಿಯವರ ಸೂಚನೆಗಳಂತೆ ಚಿಂತನೆ, ಶೀಲ, ಸೌಹಾರ್ದ ಮನೋಭಾವ, ಬುದ್ಧಿವಂತಿಕೆ, ನಾಯಕತ್ವ, ವೈಜ್ಞಾನಿಕ ಮನೋಭಾವನೆ—ಇವುಗಳನ್ನು ಮಹಿಳೆಯರು ಬೆಳೆಸಿಕೊಳ್ಳುವಂತೆ ಮಾಡಲು ಹತ್ತು ಹಲವು ಕಾರ್ಯಕ್ರಮಗಳನ್ನು ಹಾಕಿಕೊಳ್ಳುವ ಆವಶ್ಯಕತೆಯಿದೆ. ನೂರು ವರ್ಷಕ್ಕೂ ಹಿಂದೆ ಹೇಳಿದ ಸ್ವಾಮೀಜಿಯವರ ವಾಣಿಯನ್ನು ಮತ್ತೆ ಸ್ಮರಿಸಿಕೊಂಡು ಅವರ ದೃಢನಂಬಿಕೆಯನ್ನು ಸಾಕ್ಷಾತ್ಕಾರ ಮಾಡುವ ಕಾರ್ಯವನ್ನು ಸಮಾಜ, ಸಂಘ, ಮಹಿಳಾ ಸಂಘಟನೆಗಳು, ಆಂದೋಲನ ಪ್ರಮಾಣದಲ್ಲಿ ನಡೆಸುವುದು ೨೧ನೆ ಶತಮಾನದಲ್ಲಿ ಅತ್ಯಗತ್ಯ. ಸ್ವಾಮೀಜಿಯವರೇ ಹೇಳಿರುವಂತೆ, "ಸ್ತ್ರೀಯರ ಉದ್ಧಾರ ಮತ್ತು ಜನಸಾಮಾನ್ಯರ ಜಾಗೃತಿ ಇವು ಮೊದಲು ಆಗಬೇಕು. ಆಗಲೇ ಭಾರತಕ್ಕೆ ಏನಾದರೂ ಒಳಿತಾದೀತು." ಈ ವಿಷಯದಲ್ಲಿ ನಾವೆಲ್ಲರೂ ದೃಢಸಂಕಲ್ಪರಾಗಬೇಕು.

ಇಲ್ಲಿ ಮಹಿಳೆಯರ ಅಭಿವೃದ್ಧಿ ಎಂದಾಗ ಕೇವಲ ಆರ್ಥಿಕ ಮತ್ತು ರಾಜಕೀಯ ದೃಷ್ಟಿಯಿಂದ ಪರಿಗಣಿಸಬಾರದು. ಸ್ವಾಮೀಜಿಯವರು ಅನೇಕ ಸಲ ಒತ್ತಿ ಹೇಳಿರುವಂತೆ ಮಹಿಳೆ ತನ್ನತನವನ್ನು ಬೆಳೆಸಿಕೊಳ್ಳಬೇಕು. ಸ್ವಾಮೀಜಿಯವರ Be and Make (ನೀವೂ ಉತ್ತಮರಾಗಿ ಇತರರನ್ನೂ ಉತ್ತಮಗೊಳಿಸಿ) ಎಂಬ ಪುಟ್ಟ ಸೂತ್ರ ಜೀವನದ ಗುರಿ ಆಗಬೇಕು. ಇದೇ ಅವರಿಗೆ ಪ್ರತಿ ಮಹಿಳೆಯೂ ಕೊಡುವ ಕಾಣಿಕೆ ಹಾಗೂ ನಮನವಾಗಬೇಕು. ಪವಿತ್ರತೆ ಮತ್ತು ಶೀಲಗಳೇ ಅವಳನ್ನು ಕಾಪಾಡುವ ಅಸ್ತ್ರ ಎಂಬ ಅವರ ವಿಶ್ವಾಸದಲ್ಲಿ ಎಷ್ಟೊಂದು ಗೂಢಾರ್ಥಗಳಿವೆ!

ಮನಸ್ಸ್ಥೈರ್ಯ ಕಳೆದುಕೊಂಡು, ಕೇವಲ ಪಾಶ್ಚಾತ್ಯ ಅನುಕರಣೆಯಿಂದ ವ್ಯಕ್ತಿತ್ವ ಬೆಳೆಸುವ ಪೋಷಕರು, ತಾಯಂದಿರು, ತರುಣಿಯರಿಗೆ ವಿವೇಕಾನಂದರ ವಾಣಿ ಎಚ್ಚರಿಕೆ ನೀಡುವಂತಾಗಲಿ. ಮಹಿಳೆ ತನ್ನ ಪವಿತ್ರತೆ, ಶೀಲ, ಸೌಜನ್ಯಗಳನ್ನು ಒತ್ತೆಯಿಡದೆ ದಿಟ್ಟತನ, ಧೈರ್ಯದಿಂದ ಹೆಜ್ಜೆಯಿಟ್ಟು ವಿನಯ ವಿವೇಕಗಳನ್ನು ನೀಡುವ ಶಿಕ್ಷಣ ಪಡೆಯುವಂತಾಗಲಿ. ಚಿಂತನೆ, ವಿವೇಚನೆ, ಕ್ಷಮಾಗುಣ, ದಕ್ಷತೆಗಳು ಸ್ತ್ರೀಯರ ಆಭರಣಗಳೆಂಬುದನ್ನು ಮರೆಯದಂತಾಗಲಿ. ಅವುಗಳನ್ನು ಉಳಿಸಿ ಬೆಳೆಸಿಕೊಳ್ಳುವಂತಾಗಲಿ. ಸ್ವಾಮೀಜಿಯವರು ಹೇಳುವಂತೆ ಮಹಿಳೆಯರು "ತಾಯಿಯ ಹೃದಯವನ್ನೂ, ವೀರನ ಸಂಕಲ್ಪಶಕ್ತಿಯನ್ನೂ" ರೂಢಿಸಿಕೊಳ್ಳುವಂತಾಗಲಿ. ❄

ಸ್ಥಳದಾನ : ಶ್ರೀ ರಾಧಾಕೃಷ್ಣ ಗುಪ್ತ, ಜ್ಯೂಯೆಲರ್ಸ್, ದಾವಣಗೆರೆ